

ನಾಯಿಗೆ ಇರಿಸಬೇಕಾದ ಸುಂದರವಾದ ಹೆಸರೇ ಅವಳಿಗಿರುವುದು: ರೋಸಿ. ಆ ಹೆಸರಿಡಿದು ಅವಳನ್ನು ಯಾರೂ ಕರೆದುದಿಲ್ಲ. ತಾಯಿಯ ಮೊಲೆ ಚೀಪುತ್ತ ಹಿಂಬದಿಯ ಸೌದೆಕೊಟ್ಟಿಗೆಯಲ್ಲಿ ಕಳೆದ ಎಳೆಯ ಪ್ರಾಯದಲ್ಲಿ ಆ ದೊಡ್ಡ ಮನೆಯ ಹೆಣ್ಣುಮಗಳು ಅವಳಿಗೆ ರೋಸಿ ಎಂದು ಹೆಸರಿಟ್ಟಳು. ಆ ಹೆಸರು ಅವಳಿಗೆ ಇಡಬೇಕಾಗಿರಲಿಲ್ಲವೆಂದು ಆ ಹುಡುಗಿ ಬಳಿಕ ಯೋಚಿಸಿರಲೂಬಹುದು.

ಧನಿಕನೂ ಸ್ನೇಹಸಂಪನ್ನನೂ ಆದ ಒಬ್ಬ ಮನುಷ್ಯನ ಪ್ರೀತಿಪಾತ್ರಳಾಗುವುದು ರೋಸಿಯ ಬದುಕಿನ ಪರಮ ಅಭಿಲಾಷೆಯಾಗಿತ್ತು. ಆದರೆ, ಈ ಕೆಟ್ಟ ಜಗತ್ತಿನಲ್ಲಿ ಬಯಸಿದ್ದೆಲ್ಲ ಕೈಗೂಡುವುದಿಲ್ಲ ಎಂಬುದನ್ನು ಅನುಭವ ಅವಳಿಗೆ ಕಲಿಸಿದೆ.

ಯಾವುದೋ ಶಾಪಗ್ರಸ್ತ ನಿಮಿಷದಲ್ಲಿ ಅವಳು ಈ ಜಗತ್ತಿನಲ್ಲಿ ಕಣ್ಣು ತೆರೆದಳು ಎಂದು ನೆನಪು ಮಾಡಿಕೊಂಡೂ ಇದ್ದಾಳೆ. ಅವಳ ಪಾಲಿಗೆ ಇದುವರೆಗೂ ಇರುವುದು ದೌರ್ಭಾಗ್ಯವೇ. ಇಲ್ಲವಾದರೆ ಅವಳ ಜೊತೆ ಜನಿಸಿದ ಜಿಮ್ಮಿಯ ಇವತ್ತಿನ ಸ್ಥಿತಿಯೇನು? ಯಾವುದಕ್ಕೂ ತೊಂದರೆಯಿಲ್ಲ. ಹಸಿವಾದಾಗ ರುಚಿಕರವಾದ ಊಟವಿದೆ. ಉಪಚರಿಸಲು ಕೆಲಸಗಾರರಿದ್ದಾರೆ. ಸದ್ಗುಣಿಯಾದ ಯಜಮಾನನ ಲಾಲನೆಯಿದೆ. ಅವನೂ ತನ್ನ ತಾಯಿಯ ಉದರದಿಂದಲೇ ಬಂದವನಲ್ಲವೇ? ಅದುವೇ ಗೋಡೆಯ ಒಳಭಾಗದಲ್ಲಿ ನೆಲೆಸಿರುವ ರೋಸಿಯನ್ನು ಯಾಕೆ ಯಜಮಾನರು ಸರಿಯಾಗಿ ಬೆಳೆಸುವುದಿಲ್ಲ? ಅವಳು ಸ್ವತಃ ಕೇಳಿಕೊಳ್ಳುವಳು...

ನಿರ್ಬಾಧಿತವಾಗಿ ವಿರಮಿಸುವಾಗ ರೋಸಿಗೆ ಕಳೆದ ಕಾಲದ ಕುರಿತು ನೆನಪಾಗುವುದಿದೆ. ಅವಳ ತಾಯಿಯೂ ಒಡೆಯನಿಲ್ಲದ ಒಂದು ನಾಯಿ. ಅಲೆದಾಡುತ್ತ ದಿನಕಳೆಯುತ್ತಿದ್ದ ಆ ತಾಯಿ ನಾಯಿ, ಪೂರ್ಣ ಗರ್ಭವತಿಯಾದಾಗ ಆ ದೊಡ್ಡ ಮನೆಯ ಉರುವಲು ಕೊಟ್ಟಿಗೆಯಲ್ಲಿ ಆಶ್ರಯ ಪಡೆಯಿತು. ಮನೆಯಾತ ಹೊಡೆದೋಡಿಸಲು ಆಜ್ಞಾಪಿಸದೇ